ಕ್ರಿಕೆಟಿಗರನ್ನು ರಾತ್ರೋ ರಾತ್ರಿ ಕೋಟ್ಯಧಿಪತಿಗಳನ್ನಾಗಿ ಮಾಡುತ್ತಿರುವ ಐಪಿಎಲ್ ಆಟಗಾರರ ಹರಾಜು ಪ್ರತಿಬಾರಿಯೂ ಕುತೂಹಲದ ಗಣಿ. ಯಾರಿಗೂ ಗೊತ್ತೇ ಇರದ ಕ್ರಿಕೆಟಿಗ ಒಮ್ಮೆಲೇ ಕೋಟ್ಯಂತರ ಅಭಿಮಾನಿಗಳನ್ನು ಗಳಿಸುತ್ತಿರುವುದು ಈಗ ಕ್ರಿಕೆಟ್ ಲೋಕದ ಅಚ್ಚರಿ.

★ ಪ್ರಮೋದ ಜಿ.ಕೆ.



ಐಪಿಎಲ್ ಹತ್ತನೇ ಆವೃತ್ತಿಗೆ ಬೆಂಗಳೂರಿನಲ್ಲಿ ಆಟಗಾರರ ಹರಾಜು ನಡೆಯುತ್ತಿದ್ದರೆ, 'ಭಾರಿ ಬೆಲೆ ಪಡೆದ ಕ್ರಿಕೆಟಿಗರ ಸಾಧನೆ ಏನು?' ಎನ್ನುವ ಚರ್ಚೆ ಟ್ವಿಟರ್‌ನಲ್ಲಿ ಜೋರಾಗಿ ಸಾಗಿದೆ. ಅವರಿಗೆ ಕೋಟಿ ಕೋಟಿ ಹಣ ವಿನಿಯೋಗಿಸಿದ್ದು ಏಕೆ ಎನ್ನುವ ಪ್ರಶ್ನೆ ಯ ಕುರಿತು ಕಾಮೆಂಟುಗಳು ಪುಂಖಾನುಪುಂಖವಾಗಿ ಹರಿದಾಡುತ್ತಿವೆ.

ಈ ಬಾರಿಯ ಹರಾಜಿನಲ್ಲಿ 12 ಕೋಟಿ ರೂಪಾಯಿಗೆ ಆರ್‌ಸಿಬಿ ತಂಡಕ್ಕೆ ಮಾರಾಟವಾದ ಇಂಗ್ಲೆಂಡ್‌ನ ಟೈಮಲ್ ಮಿಲ್ಸ್ ಯಾರು ಎಂಬುದು ಹೆಚ್ಚು ಜನಕ್ಕೆ ಗೊತ್ತೇ ಇಲ್ಲ. ದೇಶೀ ಕ್ರಿಕೆಟ್‌ನ ಹೀರೊ ಮಿಲ್ಸ್ ಈಗ ಕೋಟ್ಯಂತರ ಅಭಿಮಾನಿಗಳ ಕಣ್ಣು ಕುಕ್ಕಿಸಿದ್ದಾರೆ. ಅಷ್ಟಕ್ಕೂ ಮಿಲ್ಸ್ ಯಾರು ಎಂಬುದನ್ನು ತಿಳಿದುಕೊಳ್ಳಲು ಹರಾಜಿನ ಬಳಿಕ ಲಕ್ಷಾಂತರ ಜನ 'ಗೂಗಲ್' ಮೊರೆ ಹೋಗಿದ್ದಾರೆ.

24 ವರ್ಷದ ಮಿಲ್ಸ್ ಆರು ತಿಂಗಳ ಹಿಂದೆಯಷ್ಟೇ ಅಂತರರಾಷ್ಟ್ರೀಯ ಟ್ವೆಂಟಿ–20 ಕ್ರಿಕೆಟಿಗೆ ಪದಾರ್ಪಣೆ ಮಾಡಿದವರು. ಅವರ ಸ್ಥಾನ ತಂಡದಲ್ಲಿ ಖಾಯಂ ಕೂಡ ಆಗಿಲ್ಲ. ಟೆಸ್ಟ್, ಏಕದಿನ ತಂಡದಲ್ಲಿಯೂ ಅವರು ಕಾಣಿಸಿಕೊಂಡಿಲ್ಲ. ನಾಲ್ಕು ಟ್ವೆಂಟಿ–20 ಪಂದ್ಯಗಳಿಂದ ಮೂರು ವಿಕೆಟ್ ಮಾತ್ರ ಪಡೆದಿದ್ದಾರೆ. ಒಂದೂ ರನ್ ಹೊಡೆದಿಲ್ಲ! ಹಾಗಿದ್ದೂ ಅವರಿಗೆ 12 ಕೋಟಿ ರೂಪಾಯಿ ಬಿಡ್!

ಆದರೆ ಮಿಲ್ಸ್ ಪಾಕಿಸ್ತಾನ ಸೂಪರ್ ಲೀಗ್‌ನಲ್ಲಿ ಕ್ವೆಟ್ಟಾ ಗ್ಲಾಡಿಯೇಟರ್ಸ್ ತಂಡದ ಪರ ಆಡಿದ್ದಾರೆ. ಬಾಂಗ್ಲಾದೇಶ ಪ್ರೀಮಿಯರ್ ಲೀಗ್‌ನಲ್ಲಿ ಚಿತ್ತಗಾಂಗ್ ವಿಕಿಂಗ್ಸ್ ಮತ್ತು ಆಸ್ಟ್ರೇಲಿಯಾದ ಬಿಗ್ ಬ್ಯಾಷ್ ಲೀಗ್‌ನಲ್ಲಿ ಬ್ರಿಸ್ಬೇನ್ ಹೀಟ್ ತಂಡಗಳನ್ನು ಪ್ರತಿನಿಧಿಸಿದ್ದರು. ಹೀಗೆ ವಿವಿಧ ಲೀಗ್‌ಗಳಲ್ಲಿ ನೀಡಿದ ಪ್ರದರ್ಶನವನ್ನೇ ಆಧರಿಸಿ ಭಾರತದ ಫ್ರಾಂಚೈಸ್‌ಗಳು ಮಿಲ್ಸ್ ಅವರಿಗೆ ಗಾಳ ಹಾಕಿವೆ. ಕೋಟಿ ಲೆಕ್ಕದಲ್ಲಿ ಹಣ ಲಭಿಸಿದ್ದಕ್ಕೆ ಸ್ವತಃ ಮಿಲ್ಸ್ ಅವರೇ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಎಡಗೈ ವೇಗಿ ಮಿಲ್ಸ್ ಸರಣಿ ಆಡಲು ಭಾರತಕ್ಕೆ ಬಂದಿದ್ದಾಗ ಮಾಧ್ಯಮಗಳ ಜೊತೆ ಮಾತನಾಡಿದ್ದರು. ಆಗ 'ಯಾವುದೇ ಟೂರ್ನಿಯಾದರೂ ಸರಿ, ಸ್ಥಿರ ಬೌಲಿಂಗ್ ಮಾಡಬೇಕೆಂದು ಬಯಸುತ್ತೇನೆ. ಪ್ರತಿ ಬಾರಿಯೂ ಉತ್ತಮ ವೇಗದಲ್ಲಿ ದಾಳಿ ನಡೆಸುತ್ತೇನೆ. ಐಪಿಎಲ್‌ನಲ್ಲಿ ಅವಕಾಶ ಸಿಗುವ ಬಗ್ಗೆ ನಿರೀಕ್ಷೆ ಇಟ್ಟುಕೊಂಡಿಲ್ಲ' ಎಂದಿದ್ದರು.

'ಮಿಲಿಯನ್ ಡಾಲರ್ ಬೇಬಿ' ಈ ರೀತಿಯ ಅಚ್ಚರಿಗಳು ಐಪಿಎಲ್‌ನಲ್ಲಿ ಇದು ಮೊದಲೇನಲ್ಲ. ಟ್ವೆಂಟಿ–20 ಕ್ರಿಕೆಟ್‌ನ ಪರಿಣತ ಬ್ಯಾಟ್ಸ್‌ಮನ್ ಯುವರಾಜ್ ಸಿಂಗ್ ವಿಷಯದಲ್ಲಿ ಅನೇಕ ಬಾರಿ ಹೀಗೆ ಆಗಿದೆ. ಹತ್ತು ವರ್ಷಗಳ ಹಿಂದೆ ಅಷ್ಟೇನೂ ಬೇಡಿಕೆಯಿಲ್ಲದ ಆಟಗಾರನಾಗಿದ್ದ ಯುವಿ, ಬ್ಯಾಟಿಂಗ್‌ನಲ್ಲಿ ದುರ್ಬಲವಾದಷ್ಟೂ ಬೆಲೆ ಹೆಚ್ಚಿಸಿಕೊಂಡೇ ಸಾಗಿದ್ದಾರೆ.

ಮೊದಲ ಎರಡು ಐಪಿಎಲ್ ಆವೃತ್ತಿಗಳಲ್ಲಿ ಕಿಂಗ್ಸ್ ಇಲೆವೆನ್ ಪಂಜಾಬ್ ತಂಡದಲ್ಲಿದ್ದ ಯುವರಾಜ್ ನಂತರ ಪುಣೆ ವಾರಿಯರ್ಸ್ ಸೇರಿದರು. ಅದೇ